ಹಾಗೂ ಕರ್ನಾಟಕ ಸರ್ಕಾರ ನೈವೇಲಿ ಲಿಗ್ನೈಟ್ ಸಂಸ್ಥೆಗೆ ನೀಡಬೇಕಾದ ಬಾಕಿಯನ್ನು ಆದಷ್ಟು ಬೇಗ ತೀರಿಸಲು ಕಾರ್ಯ ತಂತ್ರವನ್ನು ರೂಪಿಸುತ್ತಿದೆ.

ಊ) ಕೇಂದ್ರ ಸರ್ಕಾರದ ಸ್ವಾಮ್ಯದ ಕೈಗಾರಿಕೆಗಳು ನಿಗಮ ಮಂಡಳಿಗಳು ಕ.ವಿ. ಮಂಡಳಿಗೆ ಪಾವತಿ ಮಾಡಬೇಕಾದ ಬಾಕಿಯ ವಸೂಲಾತಿ ಬಗ್ಗೆ ಅವುಗಳ ನೌಕರರ ಕಲ್ಯಾಣವನ್ನು ಗಮನಿಸಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವಂತಹ ಉಗ್ರ ಕ್ರಮವನ್ನು ಕೈಗೆತ್ತಿಕೊಳ್ಳುವುದು ಕಷ್ಟಕರವಾಗಿದೆ.

ಋ) ಈ ವಿಷಯದ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸರ್ಕಾರದಲ್ಲಿನ ಸಂಬಂಧಪಟ್ಟ ಇಲಾಖೆಗಳೊಂದಿಗೆ ಉನ್ನತ ಮಟ್ಟದಲ್ಲಿ ವ್ಯವಹರಿಸುತ್ತಿದೆ. ಅಲ್ಲದೇ ಕೇಂದ್ರ ಸರ್ಕಾರದ ಸ್ವಾಮ್ಯದ ಸಂಸ್ಥೆ : ಕೈಗಾರಿಕೆಗಳಿಂದ ಬರಬೇಕಾದ ಬಾಕಿಯ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದ್ದು, ಈ ಬಾಕಿಯ ಪಾವತಿಗೆ ವ್ಯವಸ್ಥೆ ಮಾಡಲು ಒತ್ತಾಯಿಸಲಾಗುತ್ತಿದೆ. ಇದರ ಜೊತೆಗೆ ನೈವೇಲಿ ಲಿಗ್ನೈಟ್ ಸಂಸ್ಥೆಗೆ ನೀಡಬೇಕಾದ ಬಾಕಿಯನ್ನು ಆದಷ್ಟು ಬೇಗ ತೀರಿಸಲೂ ಸಹ ಕಾರ್ಯತಂತ್ರವನ್ನು ರೂಪಿಸುತ್ತಿದೆ.

ಹುಬ್ಬಳ್ಳಿ ನಗರದಲ್ಲಿ ನಡೆದ ಗೋಲಿಬಾರ್ ಘಟನೆ.

959(1082) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ ಮಹಾನಗರದಲ್ಲಿ 1994ರ ಆಗಸ್ಟ್ ತಿಂಗಳಲ್ಲಿ ನಡೆದ ಗೋಲಿಬಾರ್ ಘಟನೆಯ ಕುರಿತಂತೆ ಸರ್ಕಾರ ನೇಮಿಸಿದ ನ್ಯಾಯಮೂರ್ತಿ ಶ್ರೀ ರಾಜಶೇಖರಮೂರ್ತಿ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ;

ಆ) ಹಾಗಿದ್ದಲ್ಲಿ ವರದಿಯ ಮುಖ್ಯಾಂಶಗಳೇನು, ವರದಿಯನ್ನು ಸದನಕ್ಕೆ ಎಂದು ಸಲ್ಲಿಸಲಾಗುವುದು;

ಇ) ವರದಿಯ ಆಧಾರದ ಮೇಲೆ ಯಾರಾದರೂ ವ್ಯಕ್ತಿಗಳ ಮೇಲೆ ಕ್ರಮ ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :—

ಅ) ಹೌದು

ಆ) ಇ) ವರದಿಯು 2 ಸಂಪುಟಗಳಲ್ಲಿ ಇದ್ದು 800 ಪುಟಗಳನ್ನು ಒಳಗೊಂಡಿದ್ದು, ವರದಿಯನ್ನು ಪರಿಶೀಲಿಸುತ್ತಿದ್ದು ಇನ್ನೂ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಪರಿಶೀಲಿಸಿದ ನಂತರ ಸೂಕ್ತ ತೀರ್ಮಾನ ಕೈಗೊಂಡು ನಂತರ ಸದನದಲ್ಲಿ ಮಂಡಿಸಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.